ಕರ್ನಾಟಕ ಸರಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.

ದಿನಾಂಕ : 05–11–2017

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಹಾವೇರಿ.

**ಹಾನಗಲ್ ಕ್ಷೇತ್ರದ 538 ಕೋಟಿ ರೂಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮುಖಮಂತ್ರಿಗಳಿಂದ ಉದ್ಘಾಟನೆ ಹಾಗೂ ಶಂಕುಸ್ಥಾಪನೆ:**

# ಬಾಳಂಬೇಡ ಏತ ನೀರಾವರಿ ಹಾಗೂ 24*7 ಕುಡಿಯುವ ನೀರಿನ ಯೋಜನೆಗೆ ಮುಖ್ಯಂತ್ರಿಗಳ ಭರವಸೆ

ಹಾವೇರಿ ನ.5: ಹಾನಗಲ್ ಕ್ಷೇತ್ರದ 53 ಕೆರೆಗಳಿಗೆ ವರದಾ ನದಿಯಿಂದ ನೀರು ತುಂಬಿಸುವ ಬಾಳಂಬೇಡ ಏತನೀರಾವರಿ ಯೋಜನೆ ಹಾಗೂ ಹಾನಗಲ್ಲ ಪಟ್ಟಣಕ್ಕೆ ದಿನದ ಇಪ್ಪತ್ನಾಲ್ಕು ತಾಸು ಕುಡಿಯುವ ನೀರು ಪೂರೈಯಸುವ ಯೋಜನೆ ಅನುಷ್ಠಾನ ಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳದರು.

ಹಾನಗಲ್ಲ ಪಟ್ಟಣದ ರಾಜೀವ್ ಗಾಂಧಿ ತಾಲೂಕ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಹಾನಗಲ್ಲ ಕ್ಷೇತ್ರ 538 ಕೋಟಿ ರೂಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಹಾನಗಲ್ಲ ಕ್ಷೇತ್ರ ಅಭಿವೃದ್ದಿಗಾಗಿ ಸರ್ಕಾರ ಹೆಚ್ಚಿನ ಅನುದಾನ ಒದಗಸಲು ಬದ್ದವಾಗಿದ್ದು, ಕ್ಷೇತ್ರ ಸಮಗ್ರ ಬದಲಾವಣೆಗೆ ಶಾಸಕರಾದ ಮನೋಹರ ತಹಶೀಲದಾರವರ ಪ್ರಯತ್ನಕ್ಕೆ ಸರ್ಕಾರ ಎಲ್ಲ ನೆರವು ಒದಗಿಸಲಿದೆ ಎಂದು ಹೇಳಿದರು.

ರಾಜ್ಯ ಪ್ರಥಮ ಕಂದಾಯ ಗ್ರಾಮವಾಗಿ ಶಿವಪುರವನ್ನು ಗ್ರಾಮವನ್ನು ಘೋಷಿಸಿದ್ದೆನೆ. ದಾಖಲೆ ರಹಿತ ಗ್ರಾಮಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸುವ ಕಾರ್ಯ ಪ್ರಗತಿಯಲ್ಲಿದೆ. ವಾಸಿಸುವವನೇ ಭೂ ಒಡೆಯ ಕಾಯ್ದೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಆಮೂಲಕ ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ ಸೇರಿದಂತೆ ಸರ್ಕಾರಿ ಹಾಗೂ ಖಾಸಗಿ ಭೂಮಿಯಲ್ಲಿ ವಾಸಿಸುವವರಿಗೆ ಹಕ್ಕುಪತ್ರ ನೀಡುವ ಕ್ರಾಂತಿಕಾರಕ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು

ಡಿಸೆಂಬರ್ 1 ರಿಂದ ರಾಜ್ಯದಲ್ಲಿ ಅನಿಲಭಾಗ್ಯ ಹಾಗೂ ಸಾರ್ವತ್ರಿಕ ಅರೋಗ್ಯ ಭಾಗ್ಯ ಯೋಜನೆ ಜಾರಿಗೊಳಿಸಲಾಗುವುದು ಎಂದು ಹೇಳಿದ ಮುಖ್ಯಂತ್ರಿಗಳು ರಾಜ್ಯದಲ್ಲಿ 10 ಲಕ್ಷ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ನಿತ್ಯ ಪೌಷ್ಠಿಕ ಆಹಾರ ಒದಗಿಸಲಾತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಹಾನಗಲ್ಲ ಕ್ಷೇತ್ರದ ಶಾಸಕರಾದ ಮೊನೋಹರ ತಹಶೀಲದ್ದಾರವರು ಮಾತನಾಡಿ ಅಕ್ಕಿಆಲೂರು ಹೊಸ ತಾಲೂಕು ಎಂದು ಘೋಷಣೆ ಮಾಡುವಂತೆ ಮನವಿ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಜವಳಿ ಮತ್ತು ಮುಜುರಾಯಿ ಖಾತೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ರುದ್ರಪ್ಪ ಲಮಾಣಿ, ಹಾವೇರಿ ಜಿ.ಪಂ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ಯಲ್ಲಾಪುರ ಶಾಸಕರಾದ ಎಸ್ ಎಂ ಹೆಬ್ಬಾರ್, ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ದಿ ಮಂಡಳಿ ಅಧ್ಯಕ್ಷೆ ಶ್ರೀಮತಿ ಶಶಿಕಲಾ ಕವಲಿ, ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಸಲೀಂ ಅಹ್ಮದ್, ಕರ್ನಾಟಕ ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ದಿ ನಿಗಮದ ಅಧ್ಯಕ್ಷ ಸಿ ಎಸ್ ಬಡಿಗೇರ, ಕರ್ನಾಟಕ ಅರಣ್ಯ ಕೈಗಾರಿಕೆ ನಿಗಮ ಮತ್ತು ಮೈಸೂರು ಇಲೆಕ್ಟ್ರಿಕಲ್ ಇಂಡಸ್ಟ್ರಿ ನಿರ್ದೇಶಕರಾದ ಆರ್. ಎಸ್. ಸಾಲಿಮಠ, ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮ ನಿರ್ದೇಶಕರಾದ ರುದ್ರಪ್ಪ ಬಸಪ್ಪ ಕಂಬಾರ, ಹಾನಗಲ್ ತಾ.ಪಂ ಅಧ್ಯಕ್ಷ ಶಿವಬಸಪ್ಪ ಬಸಪ್ಪ ಪೂಜಾರ, ಹಾನಗಲ್ಲ ಪುರಸಭೆ ಅಧ್ಯಕ್ಷೆ ಶ್ರೀಮತಿ ಹಸೀನಾಬಿ ನಾಯ್ಕನವರ,

ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಜಿ.ಪಂ ಕಾರ್ಯನಿರ್ವಾಹಕ ಅಧಿಕಾರಿ ಕೆ. ಬಿ . ಆಜನಪ್ಪ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಕೆ. ಪರುಶುರಾಮ, ಸೇರಿದಂತೆ ಇತರೆ ರಾಜಕೀಯ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

**ಉದ್ಘಾಟನೆಯ ಭಾಗ್ಯಕಂಡ ಅಭಿವೃದ್ದಿ ಕಾರ್ಯಕ್ರಮಗಳು:** ಹಾನಗಲ್ಲ ನಗರದ ಶ್ರೀ ಕುಮಾರೇಶ್ವರ ಸಸ್ಯೋದ್ಯಾನ, ವಾಲ್ಮೀಕಿ ಭವನ, ಡಿಪ್ಲೋಮಾ ಕಾಲೇಜಿನ ಬಾಲಕರ ವಸತಿ ನಿಲಯ, ಪೋಲಿಸ್ ವಸತಿ ಗೃಹಗಳು, ಗೃಹಭ್ಯಾಗ್ಯ ಯೋಜನೆ ಅಡಿ ಪೌರಕಾರ್ಮಿಕರಿಗೆ ಮನೆ ಹಂಚಿಕೆ, ನವನಗರದ ಬಡವಾಣೆಯಲ್ಲಿನ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ. ನಗರೋತ್ಥಾನ ಮೂರನೇ ಹಂತದ ಯೋಜನೆಗೆ ಚಾಲನೆ, ಕರ್ನಾಟಕ ರಾಜ್ಯದ ಪ್ರಪ್ರಥಮ ಹೊಸ ಕಂದಾಯ ಗ್ರಾಮವಾಗಿ ಶಿವಪುರದ ಘೋಷಣೆ, ಹಾವೇರಿ–ಹಾನಗಲ್ಲ, ಹಾನಗಲ್ಲ–ತಡಸ, ತಡಸ–ಯಳ್ಳೂರು, ಪೂರ್ಣಗೊಂಡ ರಸ್ತೆ ಅಭಿವೃದ್ಧಿ ಕಾಮಗಾರಿ, ಅಕ್ಕಿ ಆಲೂರಿನ ರೈತ ಸಂಪರ್ಕ ಕೇಂದ್ರ, ಹೊಂಕಣ ಗ್ರಾಮದ ಯಾತ್ರಿ ನಿವಾಸ, ಆಲದಕಟ್ಟಿಯ ಗ್ರಾಮಪಂಚಾಯಿತಿ ಕಟ್ಟಡ, ಆಡೂರು ಗ್ರಾಮದ ಪೋಲಿಸ್ ವಸತಿ ಗೃಹಗಳು, ಧರ್ಮಾನದಿಯ ನಾಲಾ ಆಧುನೀಕರಣ ಹಾಗೂ ಅಕ್ಕಿಆಲೂರು ಮತ್ತು ಅಲ್ಲಾಪುರದ ಬಳಿ ಬ್ಯಾರೇಜ್‌ಗಳ ನಿರ್ಮಾಣ ಕಾಮಗಾರಿಗಳನ್ನು ಉದ್ಘಾಟಿಸಿದರು.

**ಅಭಿವೃದ್ಧಿಗಾಗಿ ಶಂಕುಸ್ಥಾಪನೆಗೊಂಡ ಕಾರ್ಯಕ್ರಮಗಳು:** ಹಾನಗಲ್ಲನ ವಾಲ್ಮೀಕಿ ಭವನದ ಮೊದಲನೆ ಮಹಡಿ ನಿರ್ಮಾಣದ ಕಾಮಗಾರಿ, ಸಾಂಸ್ಕೃತಿಕ ಭವನ, ಹಾನಗಲ್ಲ–ಶಿಕಾರಿಪುರ ರಸ್ತೆ ಅಭಿವೃದ್ಧಿ, ರಾಮತೀರ್ಥ–ಹೊಸಕೊಪ್ಪ ಗಾಜಿಪುರ ರಸ್ತೆ ಸುಧಾರಣೆ, ಕೋಡಿಯಲ್ಲಾಪುರ ಗ್ರಾಮದ ಯಾತ್ರಿ ನಿವಾಸ, ಅಕ್ಕಿ ಆಲೂರಿನ ಬಾಲಕ ಮೆಟ್ರಿಕ್ ಪೂರ್ವ ವಸತಿ ನಿಯಲ, ಕೂಡಲ ಹತ್ತಿರ ವರದಾ ನದಿಗೆ ಬ್ರಿಡ್ಜ್ ನಿರ್ಮಾಣ ಕಾಮಗಾರಿ, ಬಸಾಪುರ, ಮಕರವಳ್ಳಿ, ಕನ್ನೇಶ್ವರ, ಚಿಕ್ಕಹುಲ್ಲಾಳ ಹಾಗೂ ಬ್ಯಾತನಾಳ ಏತನೀರಾವರಿ ಯೋಜನೆಗಳು, ನಿಡಸಂಗಿ–ಬಸಾಪುರು ಗ್ರಾಮದ ದೊಡ್ಡ ಕೆರೆ ಜೀರ್ಣೋದ್ಧಾರ, ಲಕ್ಷ್ಮೀಪುರ ಹಾಗೂ ಇತರೆ ಗ್ರಾಮಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಹನ್ನೇಂದು ಗ್ರಾಮಗಳಿಗೆ ಕುಡಿಯುವ ನೀರು ಸರವರಾಜು ಯೋಜನೆ, 33 ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ಸ್ಥಾಪನೆ, ಧರ್ಮಾನದಿಗೆ ಸುಳೆಬೈಲ್, ಮಾದರಗುಂಡಿ, ಜಕ್ಕನಾಯಕನಕೊಪ್ಪದ, ಹಾಗೂ ಹೊಂಬಳಿ ಬಳಿ ಬ್ಯಾರೇಜ್‌ಗಳ ನಿರ್ಮಾಣ, ಕಲಗುಡ್ಡಿ ಹತ್ತಿರ ದೋಸಗೇರ ಹಳ್ಳಕ್ಕೆ ಚಕ್‌ಡ್ಯಾಮ್ ನಿರ್ಮಾಣ, ಗ್ರಾಮ ವಿಕಾಸ ಯೋಜನೆಯಡಿ ಕರಗುದರಿ, ಶಂಕ್ರೀಕೊಪ್ಪ, ಶಿವಪುರ, ಶ್ಯಾಡಗುಪ್ಪಿ ಗ್ರಾಮಗಳ ಅಭಿವೃದ್ದಿ ಕಾರ್ಯಕ್ರಮಗಳು, ಹಾಗೂ ಗೊಂದಿ, ಸಮ್ಮಸಗಿ, ಮಾಸಣಗಿ ಗ್ರಾಮಗಳಲ್ಲಿ ಆರೋಗ್ಯ ವಿಸ್ತರಣಾ ಚಿಕಿತ್ಸಾಲಯಗಳ ಸ್ಥಾಪನೆಗೆ ಶಂಕುಸ್ಥಾಪನೆ ಮಾಡಲಾತು.

--------------------